**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.139/2019**

**(ಚಾ.ಸಾ.12/ಪ್ರಾ.ಸಾ.7)**

ತಾಃ 24.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ನವೀನ್ ಕುಮಾರ್ |
| ತಂದೆಯ ಹೆಸರು | ರಮೇಶ್ ಎನ್ ಆರ್ |
| ವಯಸ್ಸು | 38 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ ಸ್ಥಳ | ಹೊಸಕೋಟೆ, ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಳೆದ 12 ವರ್ಷಗಳಿಂದ ಲ್ಯಾಂಕೊ ಹೊಸಕೋಟೆ ಹೈವೆ ಲಿಮಿಟೆಡ್ ಟೋಲ್‌ನಲ್ಲಿ ಟೋಲ್ ಪ್ಲಾಜಾ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ದಿಃ20.08.2018 ರಂದು ಪೊಲೀಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಹನ ಸಂಖ್ಯೆ ಕೆಎ-03/ಎಇ-2652 ವಾಹನವು ನಮ್ಮ ಟೋಲ್ ನಲ್ಲಿ ಪ್ರಯಾಣಿಸಿದ ಬಗ್ಗೆ ಸಮಯ ಮತ್ತು ದಿನಾಂಕವನ್ನು ಹಾಗೂ ಸಿಸಿ ಟಿವಿ ದೃಶ್ಯಾವಳಿಯನ್ನು ನೀಡುವಂತೆ ಮನವಿ ಸಲ್ಲಿಸಿದ್ದರು. ನಂತರ ನಮ್ಮ ಕಛೇರಿಯಲ್ಲಿ ಇರುವ ಸಿಸಿ ಟಿವಿಯನ್ನು ಪರಿಶೀಲಿಸಿದಾಗ ವಾಹನದ ನೊಂದಣಿ ಸಂಖ್ಯೆಯನ್ನು ಟೋಲ್ ಕಲೆಕ್ಟರ್ ತಪ್ಪಾಗಿ ಕೆಎ-03/ಎಇ-2657

ಎಂದು ತಪ್ಪಾಗಿ ನಮೂದು ಮಾಡಿದ್ದರು. ಆ ವಾಹನದ ನಂತರ ಹಿಂದೆ ಮತ್ತು ಮುಂದೆ ಚಲಿಸಿದ ವಾಹನಗಳನ್ನು ಸಿಸಿ ಟಿವಿಯಲ್ಲಿ ಪರಿಶೀಲಿಸಿದಾಗ ಕೆಎ-03/ಎಞ-2652 ರ ವಾಹನವು ನಮ್ಮ ಟೋಲ್ ನಲ್ಲಿ ರಾತ್ರಿ 11.53 ಸಮಯಕ್ಕೆ ಪ್ರಯಾಣಿಸಿದ ಬಗ್ಗೆ ಛಾಯಾಚಿತ್ರ ಮತ್ತು ಸಿಸಿ ಟಿವಿ ದೃಶ್ಯಾವಳಿಯೊಂದಿಗೆ ಪೊಲೀಸರಿಗೆ ಮಾಹಿತಿ ನೀಡಿರುತ್ತೇನೆ. ಆ ವಾಹನದ ಛಾಯಾಚಿತ್ರವನ್ನು ಸಾಕ್ಷಿಯು ಗುರುತಿಸಿದ್ದು ಸದರಿ ಛಾಯಾಚಿತ್ರವನ್ನು ನಿ.ಪಿ.37 ಮತ್ತು 38 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು 65(ಬಿ) ದೃಢೀಕರಣ ಪ್ರಮಾಣ ಪತ್ರವನ್ನು ಹಾಗೂ ವಾಹನಗಳ ನೊಂದಣಿ ಸಂಖ್ಯೆ ಮತ್ತು ಲಾಗ್ ಪುಸ್ತಕದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.39 ರಿಂದ 42 ಎಂದು ಗುರುತಿಸಲಾಯಿತು. ನ್ಯಾಯಾಲಯದ ಕಂಪ್ಯೂಟರ್ ಮೂಲಕ ಪೊಲೀಸರು ಜಪ್ತಿಪಡಿಸಿದ ಪೆನ್ ಡ್ರೈವ್ ಅನ್ನು ತೆರೆದು ಕಂಪ್ಯೂಟರ್ ಹಾಕಿ ತೋರಿಸಿದಾಗ ಸಾಕ್ಷಿಯು ದೃಶ್ಯಾವಳಿಯ ಸಮಯ ರಾತ್ರಿ 11.53-16 ಸಮಯದಲ್ಲಿ ಕೆಎ-03/ಎಞ-2652 ಕಾರ್ ನಮ್ಮ ಟೋಲ್ ಗೇಟ್ ಮೂಲಕ ಹಾದು ಹೋಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ.ಎಮ್ ಆರ್ ಎನ್ ವಕೀಲರಿಂದಃ</u>

2. 2018 ರಲ್ಲಿ ನಮ್ಮ ಟೋಲ್ ಪ್ಲಾಜಾದ ಲಾಗ್ ಪುಸ್ತಕವನ್ನು ಬೆಳಿಗ್ಗೆ 6.00 ರಿಂದ 2.00 ಗಂಟೆ, 2.00 ರಿಂದ ರಾತ್ರಿ 10.00 ಗಂಟೆ ಮತ್ತು ರಾತ್ರಿ 10.00 ರಿಂದ ಬೆಳಿಗ್ಗೆ 6.00 ಗಂಟೆಯವರೆಗೆ ಪಾಳಿಯ ಕೆಲಸ ಇತ್ತು. ದಿಃ20.08.2018 ರಂದು ನನ್ನ ಪಾಳಿಯ ಕೆಲಸ ರಾತ್ರಿ 10.00 ರಿಂದ ಬೆಳಿಗ್ಗೆ 6.00 ರವರೆಗೆ ಇತ್ತು. ಲಾಗ್ ಪುಸ್ತಕದಲ್ಲಿ ನಮ್ಮ ಹೆಸರು, ಒಳ ಸಮಯ ಮತ್ತು ಹೊರ ಸಮಯ ಹಾಗೂ ಸಹಿಯನ್ನು ನಮೂದು

ಮಾಡಬೇಕು ಎಂದರೆ ಸರಿ. ನಿ.ಪಿ.42 ರಲ್ಲಿ ನಾನು ಒಳಬಂದ ಮತ್ತು ಹೊರ ಹೋದ ಸಮಯ ಮತ್ತು ನನ್ನ ಸಹಿ ಇಲ್ಲ ಎಂದರೆ ಸರಿ. ನಿ.ಪಿ.39 ರಂತೆ ನಾನು ಮಾಹಿತಿ ನೀಡಿರುವ ವಿಚಾರವು ಕೆಎ-03/ಎಇ-2657 ರ ಕಾರಿಗೆ ಸಬಂಧಿಸಿದ್ದು ಎಂದರೆ ಸರಿ. 2018 ರಲ್ಲಿ ಟೋಲ್ ಗೇಟ್ ನಲ್ಲಿ ವಾಹನಗಳು ಬಂದಾಗ ಅವುಗಳ ನೊಂದಣಿ ಸಂಖ್ಯೆಯನ್ನು ಸ್ವಯಂ ಚಾಲಿತ ಯಂತ್ರಗಳು ರೆಕಾರ್ಡ್ ಮಾಡುತ್ತಿರಲಿಲ್ಲ. ನಾವು ನಮೂದು ಮಾಡಬೇಕಿತ್ತು. ನಿ.ಪಿ.40 ರಲ್ಲಿ ವಾಹನದ ಪೂರ್ಣ ನೊಂದಣಿ ಸಂಖ್ಯೆ ನಮೂದು ಇಲ್ಲ ಎಂದರೆ ಸರಿ. ಕಾರಣ ವಾಹನ ಸಂದಣಿ ಜಾಸ್ತಿ ಇದ್ದುದ್ದರಿಂದ 4 ಸಂಖ್ಯೆಗಳನ್ನು ಮಾತ್ರ ನಮೂದು ಮಾಡುತ್ತಿದ್ದೇವು. ವಾಹನ ಸಂದಣಿ ಜಾಸ್ತಿ ಇದ್ದ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಮಾಹಿತಿ ನೀಡಿಲ್ಲ. ರಾತ್ರಿ 11.53 ರ ಸಮಯದಲ್ಲಿ ವಾಹನ ಸಂದಣಿ ಇರಲಿಲ್ಲ ಮತ್ತು ನಾನು ಈ ಬಗ್ಗೆ ಪೊಲೀಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.40 ರಲ್ಲಿ ನಾನು ಹೇಳಿದ ವಾಹನವು ಯಾವ ರೀತಿಯ ವಾಹನ ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.40 ಕ್ಕೆ ಮೇಲಾಧಿಕಾರಿಗಳು ಸಹಿ ಮಾಡಿಲ್ಲ ಎಂದರೆ ಸರಿ. ನಮ್ಮ ಟೋಲ್ ಗೆ ನಾನು ಮೇಲಾಧಿಕಾರಿ ಅಲ್ಲ ಎಂದರೆ ಸರಿ. ಪೊಲೀಸರಿಗೆ ಮೇಲಾಧಿಕಾರಿಗಳ ಅನುಮತಿ ಇಲ್ಲದೇ ದಾಖಲೆ ಕೊಡಲು ಬರುವುದಿಲ್ಲ ಎಂದರೆ ಅವರ ಅನುಮತಿ ಪಡೆದು ಕೊಟ್ಟಿರುತ್ತೇನೆ. ಮೇಲಾಧಿಕಾರಿಗಳು ಅನುಮತಿ ನೀಡಿದ ಬಗ್ಗೆ ಪೊಲೀಸರಿಗೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿ.

3. ನಿ.ಪಿ.41 ರ ದೃಢೀಕರಣ ಪತ್ರದಲ್ಲಿ ಕಾರಿನ ನೊಂದಣಿ ಸಂಖ್ಯೆಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ಅದೇ ರೀತಿ ಯಾವ ಸಮಯಕ್ಕೆ, ಯಾವ ಟೋಲ್ ಲೇನ್ ನಲ್ಲಿ

ಕಾರು ಹಾದು ಹೋಗಿದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಸಿಸಿ ಟಿವಿಯ ಕಂಪನಿ ಮತ್ತು ಅದು ಕೆಲಸ ಮಾಡುತ್ತಿದ್ದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ಪೊಲೀಸರಿಗೆ ಸಿಸಿ ಟಿವಿಯ ಹಾರ್ಡ್ ಡಿಸ್ಕ್ ಅನ್ನು ಕೊಟ್ಟಿಲ್ಲ. ಪೊಲೀಸರೇ ಪೆನ್ ಡ್ರೈವ್ ಅನ್ನು ತಂದಿದ್ದರು. ಪೆನ್ ಡ್ರೈವ್ ಗೆ ನಮ್ಮಲ್ಲಿಯೇ ಇದ್ದ ಟೆಕ್ನಿಷಿಯನ್ ಮೂಲಕ ದೃಶ್ಯಾವಳಿಗಳನ್ನು ವರ್ಗಾವಣೆ ಮಾಡಿ ಕೊಟ್ಟಿರುತ್ತಾರೆ. ಅವರ ಹೆಸರನ್ನು ನಿ.ಪಿ.41 ರಲ್ಲಿ ಬರೆದಿಲ್ಲ ಎಂದರೆ ಸರಿ. ಪೊಲೀಸರು ಆ ಸಂದರ್ಭದಲ್ಲಿ ಯಾವುದೇ ಮಹಜರ್ ಬರೆದಿಲ್ಲ. ನಿ.ಪಿ.41 ರ ನಮೂನೆಯನ್ನು ಪೊಲೀಸರೇ ತಂದಿದ್ದು ನಾನು ನನ್ನ ಹಸ್ತಾಕ್ಷರದಲ್ಲಿ ಭರ್ತಿ ಮಾಡಿರುತ್ತೇನೆ. ಪೆನ್ ಡ್ರೈವ್ ಅನ್ನು ನನ್ನ ಮುಂದೆ ಪೊಲೀಸರು ಸೀಲು ಮತ್ತು ಮೊಹರು ಮಾಡಿ ಪಡೆದುಕೊಂಡಿಲ್ಲ. ನಿ.ಪಿ.37 ರಲ್ಲಿ ಇರುವ ವಾಹನವು ಯಾವ ಟೋಲ್ ನಲ್ಲಿ ಹಾದು ಹೋಗುತ್ತಿದೆ ಎಂದು ಬರೀ ರಸ್ತೆ ಕಾಣಿಸುತ್ತಿದ್ದರಿಂದ ಹೇಳಲು ಆಗುವುದಿಲ್ಲ. ಆದರೆ ಆ ಛಾಯಾಚಿತ್ರವನ್ನು ನಾನೇ ಕೊಟ್ಟಿದ್ದೇನೆ. ನಿ.ಪಿ.37 ರಲ್ಲಿ ಕಾಣಿಸುತ್ತಿರುವ ವಾಹನ ನೊಂದಣಿ ಸಂಖ್ಯೆ ಕೆಎ-03/ಎಇ-2657 ರ ರೀತಿ ಕಾಣುತ್ತಿದೆ ಎಂದರೆ ಸರಿ. ಆ ದಿನ ನಮ್ಮ ಟೋಲ್ ಗೇಟ್ ನಲ್ಲಿ ಕೆಎ-03/ಎಇ-2652 ಮತ್ತು ಕೆಎ-03/ಎಇ-2657 ವಾಹನಗಳು ಹಾದು ಹೋಗಿಲ್ಲ ಎಂದರೆ ಸುಳ್ಳು. ಟೋಲ್ ನಲ್ಲಿ ವಾಹನಗಳ ಹಿಂಬದಿಯ ನೊಂದಣಿ ಫಲಕ ಕಾಣಿಸುತ್ತವೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಮತ್ತು ಸುಳ್ಳು ಛಾಯಾಚಿತ್ರಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃಇಲ್ಲ.</u>

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ವಿಜಯ್ ಕುಮಾರ್)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.